# 3

# ದೇವರನ್ನು ವಿವರಿಸುವ ಹೆಸರುಗಳು

ಯಾವುದೇ ವ್ಯಕ್ತಿ ದೇವರನ್ನು ಎಂದೂ ನೋಡದಿದ್ದರೂ, ಗುಣದಲ್ಲಿ ಆತನು ಏನಾಗಿದ್ದಾನೆ ಎಂಬುದನ್ನು ನಾವು ತಿಳಿದು ಕೊಂಡಿದ್ದೇವೆ. ಆತನು ತನ್ನ ಜನರೊಂದಿಗೆ ವ್ಯವಹರಿಸುವ ರೀತಿಯಲ್ಲಿ ಆತನ ಸ್ವಭಾವವನ್ನು ನೋಡುತ್ತೇವೆ. ದೇವರಿಂದ ಪ್ರತ್ಯೇಕಿಸಲ್ಪಟ್ಟ ಜನರು ಮಿತಿಯಿಲ್ಲದ ದೇವರ ಶಕ್ತಿ, ಬಲವನ್ನು ಬಲ್ಲವರಾಗಿರುವುದರಿಂದ, ಕೆಲವು ಸಲ ಅವರು ದೇವರನ್ನು, ಆತನ ಮಹಾ ಲಕ್ಷಣಗಳನ್ನು ಪ್ರತಿಬಿಂಬಿಸುವ ನಾಮಗಳಿಂದ ಸೂಚಿಸಿದರು.

## "ಭಯ"

ಆದಿಕಾಂಡ 31:42ರಲ್ಲಿ ದೇವರು *Pahad,* "ಭಯ" (Fear) ಎಂಬಂತೆ ವಿವರಿಸಲ್ಪಟ್ಟಿದ್ದಾನೆ. "ಭಯ" ಎಂಬ ಮಾತು ಈ ವಾಕ್ಯದಲ್ಲಿ ಸಾಮಾನ್ಯವಾಗಿ ಭಯಭಕ್ತಿಯನ್ನೂ ಪೂಜ್ಯಭಾವನೆಯನ್ನೂ *(yir'ath),* ಸೂಚಿಸುವಂಥದ್ದಲ್ಲ. ಆದರೆ ಸಾಮಾನ್ಯವಾಗಿ ಭಯಾನಕತೆಯನ್ನೂ ಭೀತಿಯನ್ನೂ ವಿವರಿಸುತ್ತದೆ (ನೋಡಿರಿ ಧರ್ಮೋಪದೇಶಕಾಂಡ 11:25ಣೆ 28:67ಣೆ 1 ಸಮುವೇಲ 11:7).

ಆಶೀರ್ವಾದವು ಚೊಚ್ಚಲು ಮಗ ಏಸಾವನಿಗೆ ಹೋಗಬಾರದು ಆದರೆ ಕಿರಿಮಗ ಯಾಕೋಬನಿಗೆ ಹೋಗಬೇಕೆಂದು ವಿಚಾರಿಸಿ ಇಸಾಕನು ಸಹಜವಾಗಿ ದೇವರ ಉದ್ದೇಶವನ್ನು ಕಡೆಗಣಿಸಲು ಪ್ರಯತ್ನಿಸಿದನು. ಗಂಡುಮಕ್ಕಳು ಹುಟ್ಟುವಾಗ "ಹಿರಿಯದು ಕಿರಿಯದಕ್ಕೆ ಸೇವೆ ಮಾಡುವುದು" (ಆದಿಕಾಂಡ 25:23) ಎಂದು ದೇವರು ಪ್ರಕಟಿಸಿದ್ದನು. ಆ ಪ್ರವಾದನೆಯಿದ್ದರೂ ಇಸಾಕನು ದೇವರ ಚಿತ್ತಕ್ಕೆ ತನ್ನನ್ನು ಒಳಪಡಿಸಿ ಕೊಳ್ಳುವದರ ಬದಲಾಗಿ, ಚೊಚ್ಚಲು ಮಗನಿಗೆ ಆಶೀರ್ವಾದ ಕೊಡುವ ಸಾಮಾನ್ಯ ಪದ್ಧತಿಯನ್ನು ಅನುಸರಿಸುವದನ್ನು ತೀರ್ಮಾನಿಸಿಕೊಂಡನು. ಯಾಕೋಬನ ಮೋಸದ ಮುಖಾಂತರವಾಗಿ, ಇಸಾಕನು ಏಸಾವನನ್ನು ಆಶೀರ್ವದಿಸುತ್ತಿರುವೆನೆಂದು ಯೋಚಿಸಿ, ಯಾಕೋಬನನ್ನು ಆಶೀರ್ವದಿಸಿದನು. ತಾನು ದೇವರ ಚಿತ್ತವನ್ನು ನಿಷ್ಫಲಗೊಳಿಸುವ ಬದಲು ತಾನೇ ನಿಷ್ಫಲಗೊಂಡಿದ್ದೇನೆಂಬುದನ್ನು ತಿಳಿದುಕೊಂಡಾಗ ಗಡಗಡನೆ ನಡುಗಿದನು (ಆದಿಕಾಂಡ 27:33). ಈ ನಡುಗುವಿಕೆಯು ಬಹುಶ ಅವನು ದೇವರಿಗೆ ಕೊಟ್ಟ ಹೆಸರಿನಲ್ಲಿ - *Pahad,* "ಭಯ" ಎಂಬುದರಲ್ಲಿ ಪ್ರತಿಬಿಂಬಿಸಲ್ಪಟ್ಟಿತು. ಬದಲಾಗದ ದೇವರ ಉದ್ದೇಶವನ್ನು ಬದಲಾಯಿಸಲು ತಾನು ಪ್ರಯತ್ನಿಸಿದ್ದನ್ನು ಅವನು ತಿಳಿದು ಕೊಂಡಾಗ ಭೀತಿ ಮತ್ತು ಭಯಾನಕತೆಯು ಅವನ ಹೃದಯವನ್ನು ತುಂಬಿಕೊಂಡವು.

ಆನಂತರದಲ್ಲಿ ಇಸಾಕನು ತನ್ನನ್ನು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಿಕೊಂಡಾಗಲೂ ಸ್ಪಷ್ಟವಾಗಿ ಅವನು ಎಂದೂ ತನ್ನ ನಡುಗುವಿಕೆಯನ್ನು ಮರೆಯಲಿಲ್ಲ. ಅವನು ತನ್ನ ಅನುಭವದ ಬಗ್ಗೆ ಯಾಕೋಬನಿಗೆ ಹೇಳಿದನು. ಇದು ಯಾಕೋಬನು *Pahad* ಎಂಬ ಹೆಸರನ್ನು ಯಾಕೆ ತಿಳಿದಿದ್ದನು ಎಂಬುದನ್ನು ವಿವರಿಸುತ್ತದೆ. ಆಣೆಯಿಡುವದರಲ್ಲಿ ಯಾಕೋಬನು ತಾನೇ ಈ ಹೆಸರಿನಿಂದ ಪ್ರಮಾಣ ಮಾಡಿದನು.

## “ಯಾಕೋಬನ ಪರಾಕ್ರಮಶಾಲಿ”

ಹಳೇ ಒಡಂಬಡಿಕೆಯಲ್ಲಿ ದೈವತ್ವದ ಇನ್ನೊಂದು ವಿವರಣೆಯು ಆದಿಕಾಂಡ 49:24ರಲ್ಲಿ ಕಂಡು ಬರುತ್ತದೆ: *’Abir Ya’akob,* “ಯಾಕೋಬನ ಪರಾಕ್ರಮಿಯಾದಾತನು.” *’Abir,* ಪದವು “ಬಲಶಾಲಿಯಾದಾತನು, ಪರಾಕ್ರಮಿಯಾದಾತನು, ಶೂರನಾದಾತನು” ಎಂಬುದು ದೈವತ್ವದ ಮೊದಲಿನ ಎರಡು ವಿವರಣೆಗಳಿಗೆ ಅಂದರೆ *’El,* “ಬಲಶಾಲಿಯಾದಾತನು” ಮತ್ತು *Shaddai,* “ಸರ್ವಶಕ್ತನು” ಎಂಬುದಕ್ಕೆ ಅರ್ಥದಲ್ಲಿ ಸಮೀಪವಾಗಿದೆ.

### *’Abir* ಪದದ ಮೊದಲಿನ ಉಪಯೋಗ

*’Abir,* “ಪರಾಕ್ರಮಿಯಾದಾತನು,” ಎಂಬ ಮಾತಿನ ಮೊದಲನೆಯ ಉಪಯೋಗವು ಯೋಸೇಫನಿಗೆ ಅವನ ತಂದೆಯಿಂದ ಕೊಡಲ್ಪಟ್ಟ ಆಶೀರ್ವಾದದಲ್ಲಿ ಕಂಡು ಬರುತ್ತದೆ. ಯೋಸೇಫನ ವಂಶಜರು *’Abir Ya’akob,* “ಯಾಕೋಬನ ಪರಾಕ್ರಮ ಶಾಲಿಯಾದತ”ನಿಂದ ಜೋಪಾಸನೆ ಮಾಡಲ್ಪಡುವರೆಂಬ ಭರವಸವಿಡು ಎಂದು ಇಸ್ರಾಯೇಲನು ಹೇಳಿದನು. *’Abir Ya’akob*ನ ಬಲದಿಂದ ಯೋಸೇಫನ ವಂಶಜರಿಗೆ ಅವರ ಬಿಲ್ಲುಗಳು ಬಲಶಾಲಿಯಾಗಿರುವವು ಮತ್ತು ಅವರ ಸೈನ್ಯಗಳು ಬಲವುಳ್ಳವು ಗಳಾಗಿರುವವು, ಯೋಸೇಫನ ಸಂತಾನ, ಎಫ್ರಾಯೀಮನ ಮತ್ತು ಮನಸ್ಸೆಯ ಗೋತ್ರಗಳು ಬಲಶಾಲಿ ಜನಾಂಗವಾಗುವವು. ಯಾಕೋಬನ ಮುಂತಿಳಿಸುವಿಕೆಯ ನಂತರ ಅನೇಕ ವರ್ಷಗಳ ಮೇಲೆ ಯೆಹೋಶುವನು, “ಯೋಸೇಫ್ಯರಾದ ಎಫ್ರಾಯೀಮ್ ಮನಸ್ಸೆ ಕುಲಗಳ ಜನರಿಗೆ, ‘ನೀವು ಮಹಾಜನರೂ ಬಹು ಬಲವುಳ್ಳವರೂ ಆಗಿರುವುದು ನಿಜಣಿ ನೀವು ಒಂದು ಭಾಗಕ್ಕಿಂತ ಹೆಚ್ಚು ತೆಗೆದು ಕೊಳ್ಳಬಹುದು’ ಎಂದು ಹೇಳಿದನು” (ಯೆಹೋಶುವ 17:17). ಇದಕ್ಕೆ ಕಾರಣವು “ಯಾಕೋಬನ ಪರಾಕ್ರಮಶಾಲಿಯಾದಾತನು” ಯೋಸೇಫನ ಮಕ್ಕಳೊಂದಿಗೆ ಇದ್ದನು.

### *’Abir* ಪದದ ನಾಲ್ಕು ಇತರ ಸಂದರ್ಭಗಳು

ದೈವತ್ವವನ್ನು ವಿವರಿಸಲು ಹಳೇ ಒಡಂಬಡಿಕೆಯಲ್ಲಿ *’Abir* ಪದವು ಇತರ ನಾಲ್ಕು ಸಂದರ್ಭಗಳಲ್ಲಿ ಉಪಯೋಗಿಸಲ್ಪಟ್ಟಿದೆ:

1. *Abir, ಮೆಸ್ಸೀಯನನ್ನು ತರಲು ಶಕ್ತಿಯುಳ್ಳಾತನು. ’Abir Ya’akob*ನಿಗೆ ದಾವೀದನು ತಾನು ದೇವರ ನಿವಾಸಕ್ಕಾಗಿ (ಪ್ರತ್ಯಕ್ಷ ಗುಡಾರಕ್ಕಾಗಿ) ಒಂದು ಸ್ಥಳವನ್ನು ಸಿದ್ಧಮಾಡುವವರೆಗೆ ತಾನು ವಿಶ್ರಾಂತಿ ತೆಗೆದುಕೊಳ್ಳುವದಿಲ್ಲವೆಂದು ಪ್ರಮಾಣ ಮಾಡಿದನು (ಕೀರ್ತನೆ 132:2-5). ದಾವೀದನ ಪವಿತ್ರವಾದ ಹಾಗೂ ಸ್ವಾರ್ಥರಹಿತ ನಿರ್ಣಯಕ್ಕೆ ಉತ್ತರವಾಗಿ ಕರ್ತನು ದಾವೀದನಿಗೆ ಪ್ರಮಾಣ ಮಾಡಿದನು: “ನಿನ್ನ ಸಂತಾನದವನನ್ನು ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವೆನು” (ಕೀರ್ತನೆ 132:11). ತಾನು ತನ್ನ ದೃಢ ನಿರ್ಣಯವನ್ನು “ಬದಲಿಸುವದಿಲ್ಲವೆಂದು” ಕರ್ತನು ಪ್ರಮಾಣ ಮಾಡಿದನು (ಕೀರ್ತನೆ 132:11). ದೇವರು ದಾವೀದನ ಕುಮಾರನಾಗಿ ಯೇಸುವನ್ನು ಕಳುಹಿಸಿದ್ದು, ಆತನನ್ನು ಸತ್ತವರೊಳಗಿಂದ ಎಬ್ಬಿಸಿದ್ದು, ಮತ್ತು ಪರಲೋಕದಲ್ಲಿ ದಾವೀದನ ಆತ್ಮಿಕ ಸಿಂಹಾಸನದ ಮೇಲೆ ಕೂರಿಸಿದ್ದು ಆನಂದಕರವಾದ ಪರಿಣಾಮವಾಗಿದೆ. ದೇವರ ವಾಗ್ದಾನದ ಈ ರೋಮಾಂಚನಕರವಾದ ನೆರವೇರುವಿಕೆಯನ್ನು ಪಂಚಾಶತ್ತಮ ದಿನದಂದು ಸಾವಿರಾರು ಜನ ಕೇಳುಗರಿಗೆ ವಿವರಿಸಿದನು: “ಅವನ ಸಂತತಿಯವರೊಳಗೆ ಒಬ್ಬನನ್ನು ಅವನ

ಸಿಂಹಾಸನದ ಮೇಲೆ ಕುಳ್ಳಿರಿಸುವೆನೆಂದು ಅವನಿಗೆ (ದಾವೀದನಿಗೆ) ದೇವರು ಆಣೆಯಿಟ್ಟು ಪ್ರಮಾಣ ಮಾಡಿದನು" (ಅಪೊಸ್ತಲರ ಕೃತ್ಯ 2:30). *'Abir Ya'akob,* "ಯಾಕೋಬನ ಪರಾಕ್ರಮ ಶಾಲಿಯಾದಾತನು," ಹೀಗೆ ತಾನು ದಾವೀದನ ಪರಾಕ್ರಮ ಶಾಲಿಯಾಗಿರುವನು ಎಂದು ತೋರಿಸಿದನು.

2. *'Abir, ಯೆರೂಸಲೇಮನ್ನು ಶುದ್ಧೀಕರಿಸಿ ಪುನ ಸ್ಥಾಪಿಸಲು ಶಕ್ತಿಯುಳ್ಳಾತನು.* ಭೂಲೋಕದ ಯೆರೂಸಲೇಮ ಪಟ್ಟಣವು ಯೆಶಾಯನ ಸಮಯದಲ್ಲಿ "ಸೂಳೆಯಾಗಿತ್ತು" ಹಾಗೂ "ಕೊಲೆಪಾತಕರಿಗೆ" ನೆಲೆಯಾಗಿತ್ತು (ಯೆಶಾಯ 1:21). ಅಧಿಕಾರಿಗಳು "ದ್ರೋಹಿಗಳೂ ಕಳ್ಳರ ಗೆಳೆಯರೂ," "ಲಂಚಗಳನ್ನು" ಪ್ರೀತಿಸುವವರೂ ಆಗಿದ್ದರು (ಯೆಶಾಯ 1:23). ಹೀಗಿದ್ದಾಗ, ಯಾಕೋಬನ ಪರಾಕ್ರಮಶಾಲಿಯಾದಾತನು, "ನಿನ್ನ ಮೇಲೆ ಕೈಮಾಡಿ ಪುಟಹಾಕಿ ನಿನ್ನ ಕಲ್ಮಷವನ್ನು ಸಂಪೂರ್ಣವಾಗಿ ಹೋಗಲಾಡಿಸಿ ನಿನ್ನ ಕಂದುಕಸರನ್ನೆಲ್ಲಾ ತೆಗೆದು ಬಿಡುವೆನು" ಎಂದು ಘೋಷಿಸಿದನು (ಯೆಶಾಯ 1:25). ಇಸ್ರಾಯೇಲಿನ ಶೂರನಾದವನು ನಂಬಿಗಸ್ತ ನ್ಯಾಯಾಧಿಪತಿಗಳನ್ನು ಪುನ ಸ್ಥಾಪಿಸುವೆನೆಂದು ಹೇಳಿದನು. ಅದರಿಂದ ಯೆರೂಸಲೇಮು "ನೀತಿಯುಳ್ಳ ಪಟ್ಟಣ ವೆಂದೂ ನಂಬಿಗಸ್ತಿಕೆಯ ಪಟ್ಟಣವೆಂದೂ" ಕರೆಯಲ್ಪಡುವುದು (ಯೆಶಾಯ 1:26). ಚೀಯೋನ್ ಪಟ್ಟಣಕ್ಕೆ ನ್ಯಾಯದ ಮೂಲಕವೂ ದೇಶಾಂತರದಿಂದ ಬಿಡುಗಡೆಯಾಗಿ ಬರುವ ಅದರ ಪ್ರಜೆಗಳಿಗೆ ನೀತಿ ಮೂಲಕವೂ ವಿಮೋಚನೆಯಾಗುವುದು.

ಹೊಸ ಒಡಂಬಡಿಕೆಯ ಸಭೆಯು ಬರುವಲ್ಲಿ - ಆತ್ಮಿಕ ಯೆರೂಸಲೇಮಿನ ಪ್ರತಿಯೊಬ್ಬ ನಿವಾಸಿಯು ನೂತನ ಹೃದಯದೊಂದಿಗೆ ಮತ್ತು ನೂತನ ಆತ್ಮದೊಂದಿಗೆ ಹುಟ್ಟಿದವನಾಗಿದ್ದು - ಯಾಕೋಬನ ಪರಾಕ್ರಮ ಶಾಲಿಯಾದಾತನು ತನ್ನ ಮಾತನ್ನು ನೆರವೇರಿಸುವನು. ಯೆರೂಸಲೇಮಿನ ಪುರಾತನ ಭೂಲೋಕದ ಪಟ್ಟಣಕ್ಕಿಂತ ಎಷ್ಟೋ ಹೆಚ್ಚು ಮಹಿಮೆಯುಳ್ಳದ್ದನ್ನು ಅಸ್ತಿತ್ವಕ್ಕೆ ಕರೆಯಲ್ಪಟ್ಟಿತು: ಆತ್ಮಿಕ ಸಭೆಯು, "ಮೇಲಿನ ಯೆರೂಸಲೇಮ್" ಎಂದು (ಗಲಾತ್ಯ 4:26), "ಪರಲೋಕದ ಯೆರೂಸಲೇಮ್" ಎಂದು (ಇಬ್ರಿಯ 12:22) ವರ್ಣಿಸಲ್ಪಟ್ಟಿದೆ.

3. *'Abir, ತಪ್ಪುಗಳನ್ನು ಸರಿಪಡಿಸಲಿಕ್ಕೆ ಶಕ್ತಿಯುಳ್ಳಾತನು.* ದೇವರ ಜನಾಂಗವನ್ನು ಸೆರೆಯಾಗಿ ಒಯ್ದು ಪುರಾತನರಿಂದ ಹಿಂಸೆಯಾಗಿರಲಿ ಇಲ್ಲವೇ ಯಾವುದೇ ಸಮಯದಲ್ಲಿ ಮಾಡಲ್ಪಟ್ಟ ಅನ್ಯಾಯವಾಗಿರಲಿ, ಯಾಕೋಬನ ಪರಾಕ್ರಮ ಶಾಲಿಯಾದವನು ಹಿಂಸಿಸಿದವರಿಗೆ, "ಅವರ ಸ್ವಂತ ರಕ್ತವನ್ನು ಕುಡಿಯುವಂತೆ" ಮಾಡುವನು (ನೋಡಿರಿ. ಯೆಶಾಯ 49:24-26ಣಿ ಪ್ರಕಟನೆ 16:4-7). ಆದುದರಿಂದ ಒಬ್ಬನು "ಸಜ್ಜನರಲ್ಲಿ ನೀತಿ ನ್ಯಾಯಗಳ ನಾಶವನ್ನು" ನೋಡುವಾಗ ನಿರಾಶೆ ಹೊಂದುವ ಅವಶ್ಯಕತೆಯಿರುವದಿಲ್ಲ (ಪ್ರಸಂಗಿ 5:8), ಯಾಕಂದರೆ *'Abir Ya'akob* ಎಂದೂ ಸಾಯುವದಿಲ್ಲ.

4. *'Abir, ಪರಲೋಕವನ್ನು ತರಲು ಶಕ್ತಿಯುಳ್ಳಾತನು.* "ದ್ವಾರಗಳು ಸದಾಕಾಲ ತೆರೆದಿರುವ" ಪಟ್ಟಣವನ್ನು ಕಟ್ಟಲಿಕ್ಕೆ ಒಬ್ಬ, *'Abir,* ಶಕ್ತನಾದಾತನು ಅವಶ್ಯಕವಾಗಿ ಬೇಕಾಗುವನು (ಯೆಶಾಯ 60:11). ಈ ಪಟ್ಟಣದಲ್ಲಿ, ದಿನದಲ್ಲಿ "ಬೆಳಕಾಗಿ ಸೂರ್ಯನು ಬೇಕಾಗಿರುವದಿಲ್ಲ"ಣಿ ಇಲ್ಲವೇ "ಪ್ರಕಾಶಕ್ಕಾಗಿ ಬೆಳಕು ಕೊಡಲು ಚಂದ್ರನು ಬೇಕಾಗಿಲ್ಲ. ಆದರೆ ನಿತ್ಯನಾದ ಬೆಳಕಾಗಿ ನಿಮಗೆ ಕರ್ತನು ಇರುವನು" ಹಾಗೂ ದೇವರು "ಮಹಿಮೆ" ಆಗಿರುವನು ಎಂದು ಹೇಳಲ್ಪಟ್ಟಿದೆ (ಯೆಶಾಯ 60:19, 20). "ನಿತ್ಯಶ್ರೇಷ್ಠತೆ, ತಲತಲಾಂತರದ ವರೆಗೆ ಉಲ್ಲಾಸಕರ" ಎಂದು ವರ್ಣಿಸಲ್ಪಡುವಂತೆ ಅದ್ಭುತಕರವಾದ ರೀತಿಯಲ್ಲಿ ಪಾಪಭರಿತ ಆತ್ಮಗಳನ್ನು ಪುನ ರೂಪಿಸಲಿಕ್ಕೆ ಶಕ್ತನಾದ ಒಬ್ಬನೇ ಜೀವಿಯು ಪರಾಕ್ರಮ ಶಾಲಿಯಾದಾತನಾಗಿದ್ದಾನೆ (ಯೆಶಾಯ 60:15).

ಹಾಗಾದರೆ *'Abir,* "ಪರಾಕ್ರಮಶಾಲಿಯಾದಾತನು," ಎಂಬ ಪದವು ಯೋಸೇಫನನ್ನು ಆಶೀರ್ವದಿಸುವದರಲ್ಲಿ, ಕ್ರಿಸ್ತನನ್ನು ಅರಸನನ್ನಾಗಿ ಮಾಡುವದರಲ್ಲಿ, ಯೆರೂಸಲೇಮನ್ನುಶುದ್ಧೀಕರಿಸಿ ಪುನ ಸ್ಥಾಪಿಸುವದರಲ್ಲಿ, ಪ್ರತಿಯೊಂದು ತಪ್ಪನ್ನುಸರಿಪಡಿಸುವದರಲ್ಲಿ ಹಾಗೂ ಪರಲೋಕವನ್ನು ಕಟ್ಟುವದರಲ್ಲಿ ದೇವರ ಶಕ್ತಿಯನ್ನು ವಿವರಿಸುವದಕ್ಕಾಗಿ ಪರಿಶುದ್ಧಾತ್ಮನಿಂದ ಉಪಯೋಗಿಸಲ್ಪಟ್ಟಿದೆ.

## "ಇಸ್ರಾಯೇಲಿನ ಕಲ್ಲು"

ಆದಿಕಾಂಡ 49:24ರಲ್ಲಿ ದೇವರ ವಿವರಣೆಯು ಉಪಯೋಗಿಸಲ್ಪಟ್ಟಿದ್ದು, *'Eben Yisra'el,* "ಇಸ್ರಾಯೇಲಿನ ಕಲ್ಲು" ಎಂದು. ಕಲ್ಲಿನಂಥೆ ದೈವತ್ವದ ಪ್ರತಿನಿಧಿಸುವಿಕೆಯು ದೇವರ ಬಲವನ್ನು (ಯೋಬ 6:12) ಮತ್ತು ಗಟ್ಟಿಯಾಗಿರುವಿಕೆಯನ್ನು (ಯೋಬ 38:30) ಒತ್ತಿ ಹೇಳುತ್ತದೆ.

ಫಿಲಿಷ್ಟಿಯರ ವಿರುದ್ಧವಾಗಿ ಇಸ್ರಾಯೇಲ್ಯರಿಗೆ ದೇವರ ಸಹಾಯದ ಸ್ಮರಣಾರ್ಥಕವಾಗಿ ಒಂದು ಕಲ್ಲನ್ನು ಸ್ಮಾರಕವಾಗಿ ಸಮುವೇಲನು ಉಪಯೋಗಿಸಿದನು. ಅವನು ಅದನ್ನು *ಎಬೆನೆಜರ,* "ಸಹಾಯ ಕಲ್ಲು" (1 ಸಮುವೇಲ 7:12) ಎಂದು ಕರೆದನು. "ನಾನು ಯಾವಾಗಲೂ ಆಶ್ರಯಿಸಿ ಕೊಳ್ಳುವ ಬಂಡೆಯಾಗಿರುಣಿ ನನ್ನ ರಕ್ಷಣೆಗೋಸ್ಕರ ಆಜ್ಞಾಪಿಸಿದ್ದೀಯಲ್ಲವೇ, ನೀನೇ ನನ್ನ ಬಂಡೆಯೂ ಕೋಟೆಯೂ ಆಗಿದ್ದೀಯಲ್ಲಾ" (ಕೀರ್ತನೆ 71:3) ಎಂದು ಪ್ರಾರ್ಥಿಸಿದಾಗ ದಾವೀದನ ಮನಸ್ಸಿನಲ್ಲಿ ಭದ್ರತೆಯು ಇತ್ತು. "ಯೆಹೋವನಂಥ ಪರಿಶುದ್ಧನು ಇಲ್ಲವೇ ಇಲ್ಲಣಿ ನಿನ್ನ ಹೊರತು ಮತ್ತೊಬ್ಬನಿಲ್ಲ, ನಮ್ಮ ದೇವರಂಥ ಆಶ್ರಯ ದುರ್ಗವು ಯಾವುದೂ ಇಲ್ಲ" (1 ಸಮುವೇಲ 2:2) ಎಂದು ಹನ್ನಳು ದೇವರನ್ನು ಕೊಂಡಾಡುತ್ತ ಹೇಳಿದಳು. ನಿತ್ಯವಾದ ಬಂಡೆಯಾಗಿದ್ದಾನೆ ಎಂದು ಯೆಶಾಯನು ಯೆಹೋವನನ್ನು ಕೊಂಡಾಡಿದನು (ಯೆಶಾಯ 26:4).

ಇಸ್ರಾಯೇಲ್ಯರು ಅರಣ್ಯದಲ್ಲಿ ಅಕ್ಷರಶ ವಾಗಿ ದೇವರು ಬಂಡೆಯಿಂದ ಅದ್ಭುತಕರವಾಗಿ ಉತ್ಪಾದಿಸಿದ ನೀರನ್ನು ಕುಡಿದರು (ವಿಮೋಚನಕಾಂಡ 17:6ಣಿ ಕೀರ್ತನೆ 78:15). ಹೀಗೆ ಅವರು ಆತ್ಮಿಕ ಬಂಡೆಯಿಂದ, ಕ್ರಿಸ್ತನಿಂದ ಕುಡಿದರು, ಆತನು ಆ ದಿನಗಳಲ್ಲಿ ಮೋಶೆಯ ಮುಖಾಂತರ ಆತ್ಮಿಕ ಬೋಧನೆ ಕೊಟ್ಟನು (1 ಕೊರಿಂಥ 10:4, 5). ಆತ್ಮಿಕ ಬೋಧನೆಗಳನ್ನು ಕುಡಿಯಲು ನಿರಾಕರಿಸಿದ್ದರಿಂದ, ಅವರಲ್ಲಿ ಅನೇಕರ ಬಗ್ಗೆ ದೇವರಿಗೆ ಮೆಚ್ಚಿಕೆಯಾಗಲಿಲ್ಲ. ಅವರು ತಮ್ಮ ರಕ್ಷಣೆಯ ಬಂಡೆಯನ್ನು "ತಿರಸ್ಕರಿಸಿದರು" (ಧರ್ಮೋಪದೇಶಕಾಂಡ 32:15).

ಕ್ರಿಸ್ತನು ಹಳೇ ಒಡಂಬಡಿಕೆಯಲ್ಲಿ ಆತ್ಮಿಕ ಬಂಡೆಯಾಗಿದ್ದನು. ಅಷ್ಟೇ ಅಲ್ಲ, ಹೊಸ ಒಡಂಬಡಿಕೆಯ ದಿನಗಳಲ್ಲಿ ಆತನು ಬಂಡೆಯಾಗಿರುವನೆಂದು ಮುಂತಿಳಿಸಲ್ಪಟ್ಟಿತ್ತು. ಮೆಸ್ಸೀಯನು ಎರಡು ಅರ್ಥದಲ್ಲಿ ಬಂಡೆಯಾಗಿರುವನೆಂದು ಪ್ರವಾದಿಗಳು ಹೇಳಿದರು. ಆತನು ಎಡವುವ ಕಲ್ಲು ಆಗಿರುವನು (ಯೆಶಾಯ 8:14). ತಪ್ಪು ಮನೋಭಾವನೆಯುಳ್ಳವರು ಅದರ ಮೇಲೆ ಮುಗ್ಗರಿಸುವರು ಮತ್ತು ಕಟ್ಟಲ್ಪಡುವ ಕಲ್ಲಾಗಿ ಆತನು ಯೆಹೂದಿ ಕಟ್ಟುವವರಿಂದ ತಿರಸ್ಕರಿಸಲ್ಪಡುವನು. ತಿರಸ್ಕರಿಸಲ್ಪಟ್ಟ ಕಲ್ಲು ಗೋಡೆಗಳನ್ನು ಒಂದಾಗಿ ಹಿಡಿಯುವ ಮೂಲೆಗಲ್ಲಾಗಲು ನೇಮಿಸಲ್ಪಟ್ಟಿತು (ಕೀರ್ತನೆ 118:22). ಕಟ್ಟಡದ ಮುಖ್ಯ-ಕಲ್ಲಾಗಿರಲು ಯೇಸು ಮುಂತಿಳಿಸಲ್ಪಟ್ಟಿದ್ದನು. "ಇಗೋ, ಪರೀಕ್ಷಿತವಾಗಿಯೂ ಮಾನ್ಯವಾಗಿಯೂ ಇರುವ ಮೂಲೆಗಲ್ಲನ್ನು ಚೀಯೋನಿನಲ್ಲಿ ಸ್ಥಿರವಾದ ಅಸ್ತಿವಾರವನ್ನಾಗಿ ಇಡುತ್ತೇನೆ" (ಯೆಶಾಯ 28:16).

ಮುಂತಿಳಿಸುವಿಕೆಗಳು ನೆರವೇರಿಸಲ್ಪಟ್ಟವು. ಕ್ರೈಸ್ತತ್ವವು ಸ್ಥಾಪಿಸಲ್ಪಟ್ಟಿತು - ಕಲ್ಲುಚೂರುಗಳ ಮೇಲೆ ಅಲ್ಲ, *petros* ಮೇಲೆ ಅಲ್ಲ, ಆದರೆ, ವಿಶಾಲವಾದ ಬಂಡೆಯ ಮೇಲೆ, ಅತಿದೊಡ್ಡ ಕಲ್ಲಿನ ಮೇಲೆ, *petra*ದ ಮೇಲೆ ಸ್ಥಾಪಿಸಲ್ಪಟ್ಟಿತು (ನೋಡಿರಿ ಮತ್ತಾಯ 16:16-18), "ಹಾಕಿರುವ ಅಸ್ತಿವಾರವು ಯೇಸು ಕ್ರಿಸ್ತನೇಣಿ ಆ ಅಸ್ತಿವಾರವನ್ನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ" (1 ಕೊರಿಂಥ 3:11). ಅವಿಶ್ವಾಸಿಗಳು ವಾಕ್ಯಕ್ಕೆ ಅವಿಧೇಯರಾಗಿ ಕ್ರಿಸ್ತನ ಸಂದೇಶಕ್ಕೆ ಎಡವಿಬಿದ್ದರು (1 ಪೇತ್ರ 2:7, 8). "ಈ ಕಲ್ಲಿನ ಮೇಲೆ" ಯೆಹೂದ್ಯರು ಬೀಳುವರು. "ಚೂರುಚೂರಾಗಿ ಒಡೆಯಲ್ಪಟ್ಟರು" ಹಾಗೂ "ಧೂಳಿನಂತೆ - ಚದರಿ ಹೋದರು" (ಮತ್ತಾಯ 21:44). "ಸಜೀವ ಕಲ್ಲಾಗಿ" ಆತನನ್ನು ಸ್ವೀಕರಿಸಿದವರಿಗೆ ಯೇಸುವು ಅತೀ ಅಮೂಲ್ಯನಾದನು - ಅವರಿಗೆ ಸಮಯಕ್ಕಾಗಿಯೂ ನಿತ್ಯತ್ವಕ್ಕಾಗಿಯೂ ಆಧಾರವಾದನು (1 ಪೇತ್ರ 2:4, 7).

## "ರೋಷವುಳ್ಳವನು"

*Qanna'*, "jealous," ಪದವು ಬಣ್ಣ ಹಚ್ಚುವದರಿಂದ "ಬಹಳವಾಗಿ ಕೆಂಪಾಗುವುದು" ಎಂಬ ಮೂಲ ಅರ್ಥದಿಂದ ಬಂದಿದೆಣಿ ಇದು ಆಳವಾದ ಭಾವನೆಯ ಪರಿಣಾಮದಿಂದ ಉಂಟಾಗುವ ಒಬ್ಬನ ಮುಖದ ಬಣ್ಣಕ್ಕೆ ಸಂಬಂಧಿಸಿದೆ. ಗ್ರಿಕ್ ಪದ *zelos*, "jealousy," ಎಂಬುದು "ಕುದಿಯುವದಕ್ಕೆ" ಎಂಬರ್ಥದಿಂದ ಬರುತ್ತದೆ. ಆದುದರಿಂದ ಆಳವಾದ ಉದ್ವೇಗವು, ದೇವರು *Qanna'*, "ರೋಷವುಳ್ಳವನು" ಎಂದು ಕರೆಯಲ್ಪಟ್ಟಿರುವುದು ಒಳಗೊಂಡಿರುತ್ತದೆ.

ದೇವರು ಮತ್ಸರವುಳ್ಳವನು ಎಂದು ಹೇಳಲ್ಪಟ್ಟಿರುವದಿಲ್ಲ. ಆದರೆ ಆತನು ರೋಷವುಳ್ಳಂಥಾವನು ಎಂದು ಹೇಳುವಾಗ *Qanna'*, "ರೋಷವುಳ್ಳವನು" (ಅಂದರೆ ಅಸೂಯೆ ಪಡುವವನಾದಾತನು) ಎಂಬುದು ಆತನ ಹೆಸರುಗಳಲ್ಲಿ ಒಂದಾಗಿದೆ (ವಿಮೋಚನಕಾಂಡ 34:14). ಮತ್ಸರ ಎಂಬುದು ಮನುಷ್ಯನು ಇನ್ನೊಬ್ಬ ವ್ಯಕ್ತಿಯನ್ನು ಸ್ಥಳದಿಂದ ತೆಗೆದು ಹಾಕುವುದಕ್ಕೆ ಬಲವಾಗಿ ಅಪೇಕ್ಷಿಸುವುದು, ಸಂಪೂರ್ಣವಾಗಿ ಸೈತಾನನದ್ದಾಗಿರುತ್ತದೆ. ಶರೀರದ ಕೆಲಸವಾಗಿದೆ (ಗಲಾತ್ಯ 5:21). ಅಸೂಯೆ ಪಡುವುದು ಇನ್ನೊಬ್ಬ ವ್ಯಕ್ತಿಯನ್ನು ತಾನೇ ಸಂಪೂರ್ಣವಾಗಿ ವಶಪಡಿಸಿಕೊಳ್ಳುವ ಅಪೇಕ್ಷೆಯು ಪೈಶಾಚಿಕವಾದದ್ದಾಗಿರಬಹುದು (ಅಪೊಸ್ತಲರ ಕೃತ್ಯ 13:45ಣಿ ರೋಮಾಪುರ 13:13ಣಿ ಗಲಾತ್ಯ 5:20) ಅಥವಾ ಅದು ದೈವಿಕವಾದದ್ದಾಗಿರಲೂ ಬಹುದು (2 ಕೊರಿಂಥ 11:2). ಸ್ವಾರ್ಥದ ರೀತಿಯಲ್ಲಿ ಅಲ್ಲ, ಆದರೆ ಮೆಚ್ಚಿಕೊಳ್ಳುವ ರೀತಿಯಲ್ಲಿ, ಅತ್ಯಾಸಕ್ತಿಯನ್ನು ಹುಡುಕುವುದು ಮತ್ತು ಹುಡುಕುತ್ತಿರುವುದು "ಒಳ್ಳೆಯದೂ ಸರಿಯಾದದ್ದೂ" ಆಗಿದೆ (ಗಲಾತ್ಯ 4:18).

ದೇವರಿಗೆ, ಮಾನವರನ್ನು ಸೃಷ್ಟಿಸಿದಾತನಿಗೆ, ಮನುಷ್ಯನ ಮೆಚ್ಚಿಕೆಗಳ ಹಾಗೂ ನಿಷ್ಠೆಯ ಮೇಲೆ ಕಾನೂನು ಬದ್ಧ ಹಕ್ಕು ಇರುತ್ತದೆ. ವ್ಯಕ್ತಿಯ ಹೃದಯ, ಆತ್ಮ, ಮನಸ್ಸು ಮತ್ತು ಬಲ ಎಲ್ಲವುಗಳಿಗಿಂತ ಕಡಿಮೆಯಾದದ್ದನ್ನು ಆತನು ಸ್ವೀಕರಿಸುವದಿಲ್ಲ (ಧರ್ಮೋಪದೇಶಕಾಂಡ 6:4-6ಣಿ ಮಾರ್ಕ 12:30). ಯಾವುದೇ ದೇವರಿಗಿಂತ (ವಿಮೋಚನಕಾಂಡ 34:14ಣಿ ಯೆಶಾಯ 42:8), ಯಾವುದೇ ಭೂಲೋಕದ ಅಧಿಕಾರಿಗಿಂತ (ಅಪೊಸ್ತಲರ ಕೃತ್ಯ 5:29), ಮತ್ತು ಯಾವುದೇ ಭೂಲೋಕದ ರಾಜನಿಷ್ಠೆಗಿಂತ (ಲೂಕ 14:26) ದ್ವಿತೀಯ ಸ್ಥಾನವನ್ನು ಆತನು ತೆಗೆದು ಕೊಳ್ಳುವದಿಲ್ಲ.

ಎಲ್ಲಾ ಜನರನ್ನು ಸ್ವಾಸ್ಥ್ಯವಾಗಿಟ್ಟು ಕೊಂಡಿರುವ ನಿರ್ಮಾಣಿಕನಿಗಿರುವ ನೈಸರ್ಗಿಕ ಹಕ್ಕನ್ನು ಮೀರುವುದು ಅಸೂಯೆಪಡುವ ದೇವರಿಂದ (ಧರ್ಮೋಪ

ದೇಶಕಾಂಡ 6:15) ನಾಶನವನ್ನು ಕೇಳುವುದಾಗಿದೆ. "ನಮ್ಮ ದೇವರು ದಹಿಸುವ ಅಗ್ನಿ" (ಇಬ್ರಿಯ 12:29ಣಿ ನೋಡಿರಿ ಧರ್ಮೋಪದೇಶಕಾಂಡ 4:24). "ಜೀವವುಳ್ಳ ದೇವರ ಕೈಯಲ್ಲಿ ಸಿಕ್ಕಿಬೀಳುವುದು ಭಯಂಕರವಾದದ್ದು" (ಇಬ್ರಿಯ 10:31). ಆತನ ಹೆಸರು "ರೋಷವುಳ್ಳವನು" ಎಂದಿದೆ.

## ಮುಕ್ತಾಯ

ಹೀಗೆ ದೇವರು ಕೆಲವು ತನ್ನ ಹೆಸರುಗಳಿಂದ ವಿವರಿಸಲ್ಪಟ್ಟಿದ್ದನ್ನು ನಾವು ನೋಡಿದ್ದೇವೆ. ಆತನು ಭಯಪಡಲ್ಪಡುವ ದೇವರು, ಬಲವುಳ್ಳ ಸರ್ವ ಶಕ್ತನು, ಬಲದ ಬಂಡೆಯು, ಹಾಗೂ ತನಗೆ ಮಾತ್ರವೇ ಭಯಭಕ್ತಿಯನ್ನು ಕೇಳುವ ದೇವರು ಆಗಿದ್ದಾನೆ. ಆತನನ್ನು ವಿವರಿಸುವ ಈ ಹೆಸರುಗಳನ್ನು ಅರ್ಥ ಮಾಡಿಕೊಳ್ಳುವಾಗ ದೇವರು ಯಾರಾಗಿದ್ದಾನೆ, ಆತನು ತನ್ನ ಜನಾಂಗಕ್ಕಾಗಿ ಏನಾಗಿದ್ದಾನೆ ಹಾಗೂ ನಮ್ಮಿಂದ ಏನನ್ನು ನಿರೀಕ್ಷಿಸಿದ್ದಾನೆ ಎಂಬುದರ ಸ್ಪಷ್ಟ ಚಿತ್ರವಿರುತ್ತದೆ.